## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ ಸ್ಥಾಪನೆಗಾಗಿ ಪೂರ್ವಸಿದ್ದತಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**
1. 2018-19ನೇ ಸಾಲಿನ ಪರಿಷ್ಕೃತ ಆಯವ್ಯಯ ಸಂಪುಟ-5(ಪುಟ-76).
2. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 215 ಬಿಸಿಎ 2018, ದಿ:27/09/2018.
3. ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಇವರ ಪ್ರಸ್ತಾವನೆ ಸಂಖ್ಯೆ:ದೇಹಿನಿ/ಲೆವಿ/ಅ.ಅ/ಸಿಆರ್-38/2018-19, ದಿ:11/12/2018.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಕರ್ನಾಟಕ ಸರ್ಕಾರದ 2018-19ನೇ ಸಾಲಿನ ಪರಿಷ್ಕೃತ ಆಯವ್ಯಯ ಸಂಪುಟ-5ರಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ರೂ.10.00 ಕೋಟಿಗಳನ್ನು ಲೆಕ್ಕಶೀರ್ಷಿಕೆ:4225-03-190-0-08ರಲ್ಲಿ ಒದಗಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಪ್ರಸ್ತಾಪಿಸಲಾಗಿರುತ್ತದೆ.

ಮೇಲೆ ಓದಲಾದ (3)ರ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಪ್ರಸ್ತಾವನೆಯಲ್ಲಿ ಕರ್ನಾಟಕ ಅಲೆಮಾರಿ ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳಿಗೆ ಆದೇಶ ಹೊರಡಿಸಲು ಕೋರಿರುತ್ತಾರೆ.

1. ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಕಂಪನಿ ಕಾಯ್ದೆ 2013ರನ್ವಯ ನೋಂದಾಯಿಸಿ ಸ್ಥಾಪಿಸುವುದು.
2. ಸರ್ಕಾರದ ಆದೇಶ ಸಂಖ್ಯೆ:ಪಿ.ಹೆಚ್.ಎಸ್ 262 ಎಸ್.ಇ.ಡಬ್ಲ್ಯೂ. 65, ದಿ:01/02/1966ರಲ್ಲಿ ಗುರುತಿಸಿರುವ ಅಲೆಮಾರಿ/ಅರೆ ಅಲೆಮಾರಿ ಜಾತಿಗಳಲ್ಲಿ ಹಿಂದುಳಿದ ವರ್ಗಗಳ ಅಲೆಮಾರಿ/ಅರೆ ಅಲೆಮಾರಿಗೆ ಸೇರಿದ 1) ಬೈರಾಗಿ (ಬಾವ), 2) ಬಾಲ ಸಂತೋಷಿ-ಜೋಷಿ, 3) ಬಾಜಿಗರ್, 4) ಭರಡಿ, 5) ಬುಡಬುಡಕಿ-ಜೋಷಿ-ಗೋಂಧಳಿ, 6) ಚಾರ, 7) ಚಿತ್ರಕಥಿ-ಜೋಷಿ, 8) ಧೋಲಿ, 9) ಢವೇರಿ, 10) ದೊಂಬರಿ, 11) ಘಿಸಾಡಿ, 12) ಗರುಡಿ, 13) ಗೋಪಾಲ್, 14) ಗೊಂದಳಿ, 15) ಹೆಳವ, 16) ಜೋಗಿ, 17) ಕೇಲ್ಕರಿ, 18) ಕೋಲ್ಲಟಿ, 19) ನಂದಿವಾಲ-ಜೋಷಿ-ಗೊಂದಳಿ, ಪುಲ್‌ಮಾಲ್ಲಿ, 20) ನಾಥಪಂಥಿ - ಡೌರಿ - ಗೋಸಾವಿ, 21) ನಿರ್ಶಿಕಾರಿ, 22) ಪಾಂಗ್ಯುಯಲ್, 23) ಜೋಷಿ (ಸಾಧ ಜೋಷಿ), 24) ಸಾನ್ಸಿಯ, 25) ಸರಾನಿಯ, 26) ತಿರುಮಲಿ, 27) ವಾಯ್ದು 28) ವಾಸುದೇವ್, 29) ವಾಡಿ, 30) ವಾಗ್ರಿ, 31) ವಿರ್, 32) ಬಜನಿಯ, 33)ಶಿಕ್ಕಲಿಗರ್, 34) ಗೊಲ್ಲ, 35) ಕಿಲ್ಲೆಕ್ಯಾತಸ್, 36) ಸರೋಡಿ, 37) ದುರ್ಗ-ಮುರ್ಗ-(ಬುರ್‌ಬುರ್ಚ), 38) ಹಾವಗಾರ್ (ಹಾವಾಡಿಗಾರ್), 39) ಪಿಚಗುಂಟಲ,

-----2

ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು
30 JAN 2019
ಸ.ಪ್ರ.ವ್ಯ. ಪ್ರ.ವ್ಯ-1 ಪ್ರ.ವ್ಯ-2
COMPUTER NO. 1890
DATE 01/02/19

40) ಮಸಣಿಯ ಯೋಗಿ, 40) (ಬೆಸ್ತರ್) ಬುಂಡಬೆಸ್ತ, 42) ಕಟಬು, 43) ದರ್ವೇಶ್, 44) ಕಾಶಿ ಕಪಾಡಿ, 45) ದೊಂಬಿದಾಸ ಮತ್ತು 46) ಬೈಲ್‌ಪತರ್ ಈ ಸಮುದಾಯಗಳನ್ನು ಮಾತ್ರ ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

3. ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮದ ಮೆಮೋರಂಡಮ್ ಆಫ್ ಅಸೋಸಿಯೇಷನ್ (Memorandum of Association) ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್(Article of Association) ತಯಾರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು.

4. ಶ್ರೀ ಕೆ.ರೇವಣಪ್ಪ, ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರು ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಸ್ಥಾಪನೆ ಕಾರ್ಯ ನಿರ್ವಹಿಸುವುದು ಹಾಗೂ ಆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಹೆಚ್ಚುವರಿ ಕಾರ್ಯಭಾರ ವಹಿಸುವ ಬಗ್ಗೆ ಹಾಗೂ

5. ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮದ ಸ್ಥಾಪನೆಗೆ ತಗಲುವ ಪ್ರಾರಂಭಿಕ ವೆಚ್ಚಗಳಾದ ರಿಜಿಸ್ಟ್ರೇಷನ್ ಫೀ, ಫೈಲಿಂಗ್ ಫೀ, ಪ್ರಾರಂಭಿಕ ಷೇರುಗಳ ಖರೀದಿ ಮತ್ತು ನಿಗಮ ಸ್ಥಾಪನೆಯ ಇನ್ನಿತರ ವೆಚ್ಚಗಳನ್ನು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಭರಿಸಿ ನಂತರ ಸದರಿ ನಿಗಮದಿಂದ ವಾಪಸ್ಸು ಪಡೆಯುವುದು.

6. ರಿಜಿಸ್ಟ್ರಾರ್ ಆಫ್ ಕಂಪನೀಸ್, ಕಾರ್ಪೋರೇಟ್ ಅಫೈರ್ಸ್ ಮಂತ್ರಾಲಯ, ಭಾರತ ಸರ್ಕಾರ ಇವರೊಡನೆ ನೋಂದಾಯಿಸುವಾಗ ಹಾಲಿ ಬದಲಾವಣೆಗೊಳ್ಳುತ್ತಿರುವ ಕಂಪನಿ ಕಾಯ್ದೆ 2013ರ ಅಡಿಯಲ್ಲಿ ಆಗುವ ಬದಲಾವಣೆಗಳಿಗೆ ಅನುಗುಣವಾಗಿ ಹಾಗೂ ರಿಜಿಸ್ಟ್ರಾರ್ ಆಫ್ ಕಂಪನೀಸ್, ಕಾರ್ಪೋರೇಟ್ ಅಫೈರ್ಸ್ ಮಂತ್ರಾಲಯ, ಭಾರತ ಸರ್ಕಾರ ಇವರು ಸೂಚಿಸಬಹುದಾದ ಬದಲಾವಣೆಗಳನ್ನು ಅನುಮೋದಿಸುವ Memorandum of Association and Article of Association ಗೆ ಆಗಿಂದಾಗ್ಗೆ ಆಗಬಹುದಾದ Minor ತಿದ್ದುಪಡಿಗಳನ್ನು ಅಳವಡಿಸಲು, ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಅಧಿಕಾರ ನೀಡುವುದು.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಹಿಂವಕ 262 ಬಿಸಿವ 2018, ಬೆಂಗಳೂರು, ದಿನಾಂಕ:28.01.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಇವರು ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಸ್ಥಾಪನೆ ಮತ್ತು ತತ್ಸಂಬಂಧದ ಈ ಕೆಳಕಂಡಂತೆ ಪೂರ್ವ ಸಿದ್ಧತಾ ಕ್ರಮಕೈಗೊಳ್ಳಲು ಆದೇಶಿಸಿದೆ.

-----3

1. ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಕಂಪನಿ ಕಾಯ್ದೆ 2013ರನ್ವಯ ನೋಂದಾಯಿಸಿ ಸ್ಥಾಪಿಸುವುದು.
2. ಸರ್ಕಾರದ ಆದೇಶ ಸಂಖ್ಯೆ:ಪಿ.ಹೆಚ್.ಎಸ್ 262 ಎಸ್.ಇ.ಡಬ್ಲ್ಯೂ 65, ದಿ:01/02/1966ರಲ್ಲಿ ಗುರುತಿಸಿರುವ ಅಲೆಮಾರಿ/ಅರೆ ಅಲೆಮಾರಿ ಜಾತಿಗಳಲ್ಲಿ ಹಿಂದುಳಿದ ವರ್ಗಗಳ ಅಲೆಮಾರಿ/ಅರೆ ಅಲೆಮಾರಿಗೆ ಸೇರಿದ 1) ಬೈರಾಗಿ (ಬಾವ), 2) ಬಾಲ ಸಂತೋಷಿ-ಜೋಷಿ, 3) ಬಾಜಿಗರ್, 4) ಭರಡಿ, 5) ಬುಡಬುಡಕಿ-ಜೋಷಿ-ಗೋಂಧಳಿ, 6) ಚಾರ, 7) ಚಿತ್ರಕಥಿ-ಜೋಷಿ, 8) ಧೋಲಿ, 9) ಢವೇರಿ, 10) ದೊಂಬರಿ, 11) ಘಿಸಾಡಿ, 12) ಗರುಡಿ, 13) ಗೋಪಾಲ್, 14) ಗೊಂದಳಿ, 15) ಹೆಳವ, 16) ಜೋಗಿ, 17) ಕೇಲ್ಕರಿ, 18) ಕೋಲ್ಹಟಿ, 19) ನಂದಿವಾಲ-ಜೋಷಿ-ಗೊಂದಳಿ, ಪುಲ್‌ಮಾಲ್ಲಿ, 20) ನಾಥಪಂಥಿ – ಡೌರಿ – ಗೋಸಾವಿ, 21)ನಿರ್ಶಿಕಾರಿ, 22) ಪಾಂಗ್ಯುಯಲ್, ಜೋಷಿ (ಸಾಧ ಜೋಷಿ), 24) ಸಾನ್ಸಿಯ, 25) ಸರಾನಿಯ, 26) ತಿರುಮಲಿ, 27) ವಾಯ್ದು, 28) ವಾಸುದೇವ್, 29) ವಾಡಿ, 30) ವಾಗ್ರಿ, 21) ವಿರ್, 32) ಬಜನಿಯ, 33)ಶಿಕ್ಕಲಿಗರ್, 34) ಗೊಲ್ಲ, 35) ಕಿಲ್ಲಿಕ್ಯಾತಸ್, 36) ಸರೋಡಿ, 37) ದುರ್ಗ-ಮುರ್ಗ-(ಬುರ್‌ಬುರ್‌ಚ), 38) ಹಾವಗಾರ್ (ಹಾವಾಡಿಗಾರ್), 39) ಪಿಚಗುಂಟಲ, 40) ಮಸಣಿಯ ಯೋಗಿ, 40) (ಬೆಸ್ತರ್) ಬುಂಡಬೆಸ್ತ, 42) ಕಟಬು, 43) ದರ್ವೆಶ್, 44) ಕಾಶಿ ಕಪಾಡಿ, 45) ದೊಂಬಿದಾಸ ಮತ್ತು 46)ಬೈಲ್‌ಪತರ್ ಈ ಸಮುದಾಯಗಳನ್ನು ಮಾತ್ರ ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಡಿಸುವುದು.
3. ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮದ ಮೆಮೋರಂಡಮ್ ಆಫ್ ಅಸೋಸಿಯೇಷನ್ (Memorandum of Association) ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್(Article of Association) ತಯಾರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು.
4. ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರು ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮದ-ಸ್ಥಾಪನೆ ಮತ್ತು ತತ್ಸಂಬಂಧದ ಕಾರ್ಯ ನಿರ್ವಹಿಸುವುದು ಹಾಗೂ ಆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಮುಂದಿನ ಆದೇಶದವರೆಗೂ ಹೆಚ್ಚುವರಿ ಕಾರ್ಯಭಾರ ವಹಿಸಲಾಗಿದೆ.
5. ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮದ ಸ್ಥಾಪನೆಗೆ ತಗಲುವ ಪ್ರಾರಂಭಿಕ ವೆಚ್ಚಗಳಾದ ರಿಜಿಸ್ಟ್ರೇಷನ್ ಫೀ, ಫೈಲಿಂಗ್ ಫೀ, ಪ್ರಾರಂಭಿಕ ಷೇರುಗಳ ಖರೀದಿ ಮತ್ತು ನಿಗಮ ಸ್ಥಾಪನೆಯ ಇನ್ನಿತರ ವೆಚ್ಚಗಳನ್ನು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಭರಿಸಿ ನಂತರ ಸದರಿ ನಿಗಮದಿಂದ ವಾಪಸ್ಸು ಪಡೆಯುವುದು.
6. ರಿಜಿಸ್ಟ್ರಾರ್ ಆಫ್ ಕಂಪನೀಸ್, ಕಾರ್ಪೋರೇಟ್ ಅಫೈರ್ಸ್ ಮಂತ್ರಾಲಯ, ಭಾರತ ಸರ್ಕಾರ ಇವರೊಡನೆ ನೋಂದಾಯಿಸುವಾಗ ಹಾಲಿ ಬದಲಾವಣೆಗೊಳ್ಳುತ್ತಿರುವ ಕಂಪನಿ ಕಾಯ್ದೆ 2013ರ ಅಡಿಯಲ್ಲಿ ಆಗುವ ಬದಲಾವಣೆಗಳಿಗೆ ಅನುಗುಣವಾಗಿ ಹಾಗೂ ರಿಜಿಸ್ಟ್ರಾರ್ ಆಫ್ ಕಂಪನೀಸ್, ಕಾರ್ಪೋರೇಟ್ ಅಫೈರ್ಸ್ ಮಂತ್ರಾಲಯ, ಭಾರತ ಸರ್ಕಾರ ಇವರು

-----4

ಸೂಚಿಸಬಹುದಾದ ಬದಲಾವಣೆಗಳನ್ನು ಅನುಮೋದಿಸುವ Memorandum of Association and Article of Association ಗೆ ಆಗಿಂದಾಗ್ಗೆ ಆಗಬಹುದಾದ Minor ತಿದ್ದುಪಡಿಗಳನ್ನು ಅಳವಡಿಸಲು ಸರ್ಕಾರದ ಅನುಮೋದನೆಯೊಂದಿಗೆ, ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಅಧಿಕಾರ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಬೆಂಗಳೂರು.
3. ಎಲ್ಲಾ ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾಂ, ಕಲಬುರಗಿ ವಿಭಾಗಗಳು.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು } ಆಯುಕ್ತರ ಮುಖೇನ.
6. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು } ಆಯುಕ್ತರ ಮುಖೇನ.
7. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ), ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ (ನಿ), ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ (ನಿ), ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ (ನಿ), ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

12. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಹಿರಿಯ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
14. ಸರ್ಕಾರದ ಉಪ ಕಾರ್ಯದರ್ಶಿ ಇವರ ಆಪ್ತ ಸಹಾಯಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ-1ರವರ ಆಪ್ತ ಸಹಾಯಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
16. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

-0-